International Journal of Kannada Research
www.kannadajournal.com

ISSN: 2454–5813
IJKR 2024; 10(2): 01-03
© 2024 IJKR
www.kannadajournal.com
Received: 01-01-2024
Accepted: 04-02-2024

**ವೆಂಕಮ್ಮ ಸತೀಶ್ ಅಂಬಿಗೇರ್**
ಸಹ ಶಿಕ್ಷಕರು, ಕನ್ನಡ ವಿಭಾಗ,
ಎ.ಇ.ಸಿ.ಎಸ್ ಮ್ಯಾಗ್ನೋಲಿಯ,
ಮಾರುತಿ ಪಬ್ಲಿಕ್ ಶಾಲೆ ಅರಕೆರೆ,
ಬೆಂಗಳೂರು, ಕರ್ನಾಟಕ, ಭಾರತ

Corresponding Author:
**ವೆಂಕಮ್ಮ ಸತೀಶ್ ಅಂಬಿಗೇರ್**
ಸಹ ಶಿಕ್ಷಕರು, ಕನ್ನಡ ವಿಭಾಗ,
ಎ.ಇ.ಸಿ.ಎಸ್ ಮ್ಯಾಗ್ನೋಲಿಯ,
ಮಾರುತಿ ಪಬ್ಲಿಕ್ ಶಾಲೆ ಅರಕೆರೆ,
ಬೆಂಗಳೂರು, ಕರ್ನಾಟಕ, ಭಾರತ

# ಕೀರ್ತನೆಗಳಲ್ಲಿ ಮುಕ್ತಿ ಮಾರ್ಗದ ಕುರಿತು ತಾತ್ವಿಕ ಚಿಂತನೆಗಳು

**ವೆಂಕಮ್ಮ ಸತೀಶ್ ಅಂಬಿಗೇರ್**

**DOI:** https://doi.org/10.22271/24545813.2024.v10.i2a.957

**ಅಮೂರ್ತ**

ಪ್ರಸ್ತುತ ಸಂಶೋಧನ ಲೇಖನವು ೧೫ ಮತ್ತು ೧೬ನೆಯ ಶತಮಾನದ ಹರಿದಾಸರ ಕೀರ್ತನೆಗಳಲ್ಲಿ ಭಕ್ತಿಯಿಂದ ಮುಕ್ತಿಯೆಡೆಗೆ ಸಾಗುವ ಮಾರ್ಗಗಳನ್ನು ತಿಳಿಸುತ್ತದೆ. ಜ್ಞಾನ ಮತ್ತು ಭಕ್ತಿಯ ಮೂಲಕ ಮುಕ್ತಿಯನ್ನು ಕಾಣಲು ಬಯಸುವರು ವಿಷ್ಣುವನ್ನು ತಮ್ಮ ಆರಾಧ್ಯದೈವವನ್ನಾಗಿಸಿಕೊಂಡು ಆಧ್ಯಾತ್ಮಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸುಧಾರಣೆಗಾಗಿ ಉದ್ಭವಿಸಿದ ಸಾಹಿತ್ಯ ಪ್ರಕಾರವೇ ದಾಸ ಸಾಹಿತ್ಯ ಎನ್ನುವ ತಾತ್ವಿಕ ಚಿಂತನೆಗಳನ್ನು ಬಿತ್ತರಿಸುತ್ತದೆ. ಹರಿದಾಸರು ತಮ್ಮ ಜೀವನದಲ್ಲಿ ಆಸ್ತಿ–ಪಾಸ್ತಿಗಳನ್ನು ತೊರೆದು ಮುಕ್ತಿಗಾಗಿ ಹಾತೊರೆಯುತ್ತಿರುವುದನ್ನು ಚರ್ಚಿಸಲಾಗಿದೆ. ವಿಶ್ವ ಸಾಹಿತ್ಯಕ್ಕೆ ಹರಿದಾಸ ಸಾಹಿತ್ಯದ ಕೊಡುಗೆ ಅಪಾರ. ಹರಿದಾಸ ಸಾಹಿತ್ಯ ಎಂಬುದು ಹರಿ ಭಕ್ತರಿಂದ ರಚಿತವಾದ ಸಾಹಿತ್ಯ. ಸಾಹಿತ್ಯಕ್ಕೆ ಮೂಲ ಪ್ರೇರಣೆಯೇ ಭಕ್ತಿ ಎನ್ನುವುದನ್ನು ಸಾದರಪಡಿಸಲಾಗಿದೆ.

**ಮುಖ್ಯಸೂಚಿಪದಗಳು:** ಶ್ರೀಪಾದರಾಜರ ಕೀರ್ತನೆ, ಗೋಪಲರಾಯರ ಕೀರ್ತನೆ ಮತ್ತು ವಿಜಯದಾಸರ ಕೀರ್ತನೆಗಳು

**ಪೀಠಿಕೆ**

ಹರಿದಾಸ ಸಾಹಿತ್ಯ ಕೀರ್ತನೆಗಳಿಗೆ ಮಧ್ವಚಾರ್ಯರು ಪ್ರತಿಪಾದಿಸಿದ ದ್ವೈತ ಸಿದ್ಧಾಂತವೇ ಪ್ರೇರಣೆಯಾಗಿದೆ. ಇವರು ವೈದಿಕ ಪರಂಪರೆಯನ್ನು ಒಪ್ಪಿಕೊಂಡು ಸಮಾಜದ ಮಧ್ಯದಲ್ಲಿ ಸಂಚರಿಸಿದವರು. ವೇದ ಉಪನಿಷತ್ತುಗಳನ್ನು ತಿರುಳ್ಗನ್ನಡದಲ್ಲಿ ಪ್ರತಿಪಾದಿಸಿದರು. ಜನಪ್ರೀಯತೆ, ಜನಸಮ್ಮುಖತೆ, ದಾಸಸಾಹಿತ್ಯದ ಪ್ರಮುಖ ಲಕ್ಷಣಗಳು. ಕೀರ್ತನೆ, ಸುಳಾದಿ, ಉಗಾಭೋಗ, ಮುಂಡಿಗೆಯಂತ ಕಾವ್ಯ ರೂಪಗಳ ಮೂಲಕ ಅಭಿವ್ಯಕ್ತಗೊಂಡ ದಾಸ ಸಾಹಿತ್ಯಕ್ಕೆ ಕರ್ನಾಟಕದಲ್ಲಿ ದೊಡ್ಡ ಪರಂಪರೆ ಇದೆ.೧

“ಕನಾಟಕದ ರಾಯಚೂರು ಜಿಲ್ಲೆಯನ್ನು ದಾಸ ಸಾಹಿತ್ಯದ ತೊಟ್ಟಿಲು” ಎಂದು ಕರೆಯುತ್ತೇವೆ. ದಾಸ ಎಂದರೆ ‘ಸೇವಕ’ ಎಂದರ್ಥ. ಶ್ರೀಹರಿಯಲ್ಲಿ ಭಕ್ತಿಯನ್ನಿಟ್ಟು ತಮ್ಮ ಮನಸ್ಸನ್ನು ಪರಿಶುದ್ಧವಾಗಿಸಿಕೊಳ್ಳಲು ತ್ಯಾಗಜೀವನ ನಡೆಸುತ್ತಾ, ಬಾಹ್ಯ ಜೀವನದ ವ್ಯಾಮೋಹ ತೊರೆಯಲು ಹರಿನಾಮ ಜಪಿಸಲು ರಚಿಸಿದ ಸಾಹಿತ್ಯ ಇದಾಗಿದೆ.

ಮನುಷ್ಯರು ಸ್ವಾರ್ಥ ಜೀವನವನ್ನು ತ್ಯಜಿಸಿ, ನಾನು ಎಂಬುದನ್ನು ತೊರೆದು, ಭವಾವಳಿ(ಜನ್ಮ ಪುನರ್ಜನ್ಮಗಳಿಂದ) ಮುಕ್ತಿಯನ್ನು ಪಡೆಯಲು ಹರಿನಾಮ ಸ್ಮರಣೆಯತ್ತ ಸಾಗುತ್ತಿದ್ದಾರೆ. “ಕರು ತಾಯಿಯನ್ನು ಹುಡುಕಿಕೊಂಡು ಹೋಗುವಂತೆ ದಾಸರು ಹರಿಯನ್ನು ಹುಡುಕುತ್ತಾ ಸಾಗುತ್ತಿದ್ದಾರೆ”. ವಿಶ್ವದ ಮೂಲಭೂತ ಸತ್ಯದ ಅರಿವಿಗೆ ಈ ಭಕ್ತಿ ಮಾರ್ಗ ಸುಲಭವೆಂಬುದು ಕೀರ್ತನೆಕಾರರ ಒಟ್ಟು ಧಾಟಿಯಾಗಿದೆ. ನವವಸಹತುಶಾಹಿ ಆಕ್ರಮಣದ ಸಂದರ್ಭದಲ್ಲಿ ನಮ್ಮ ಸಾಂಸ್ಕೃತಿಕ ನೆಲೆಗಳನ್ನು ಉಳಿಸಿ ಕೊಳ್ಳಬೇಕಾದುದ್ದು ಅತ್ಯವಶ್ಯಕವಾಗಿತ್ತು. ದಾಸ ಸಾಹಿತ್ಯ ತಾಳ್ಮೆ, ಸಹನೆ, ವಾತ್ಸಲ್ಯ, ಪರೋಪಕಾರ, ತ್ಯಾಗದಂತಹ ಮೌಲ್ಯಗಳನ್ನು ಸ್ಥಾಪಿಸಿದ ಭಕ್ತಿ ಪಂಥಗಳು. ಜಾಗತೀಕರಣಕ್ಕೆ ಹಾಗೂ ಪಾಶ್ಚಾತ್ಯ ಸಂಸ್ಕೃತಿಗೆ ಪರ್ಯಾಯ ಶಕ್ತಿಗಳಾಗಿ ಬೆಳೆಯುವ ಸಾಧ್ಯತೆಗಳನ್ನು ತೋರಿಸಿದ್ದಾರೆ. ದಾಸರು ಪ್ರಾಪಂಚಿಕ ಸುಖಗಳು ನಶ್ವರ, ಇವು ಶಾಶ್ವತವಲ್ಲ ಎಂಬುದನ್ನು ತಿಳಿಸುತ್ತಾರೆ.೨

ಕೀರ್ತನೆಗಳು ಅಥವಾ ಪದಗಳೆಂದರೆ ಅದರಲ್ಲಿ ಆತ್ಮ ನಿವೇದನೆ, ಸ್ತೋತ್ರ, ಉಪದೇಶ, ತತ್ವ ಅನುಭವ ಇತ್ಯಾದಿ ವಿಷಯ ವೈವಿಧ್ಯಗಳು ಸಮಾವೇಶಗೊಳ್ಳುತ್ತವೆ. ಇಲ್ಲೆಲ್ಲಾ ಪಲ್ಲವಿ, ಅನುಪಲ್ಲವಿ, ಚರಣಗಳು ಇದ್ದು ಭಕ್ತಿಭಾವವು ಸಂಗೀತ ಸಹಚರ್ಯಯಲ್ಲಿ ಸಾಕ್ಷಾತ್ಕಾರದ ಅನುಸಂಧಾನಕ್ಕೆ ಅನುವು ಮಾಡಿಕೊಡುತ್ತವೆ.೧

ಭಕ್ತಿ ಬೇಕು ವಿರಕ್ತಿ ಬೇಕು ಸರ್ವ
ಶಕ್ತಿ ಬೇಕು ಮುಂದೆ ಮುಕ್ತಿಯ ಬಯಸುವಗೆ //ಪ//
ಸತಿ ಅನುಕೂಲ ಬೇಕು ಸುತನಲ್ಲಿ ಗುಣಬೇಕು
ಮತಿವಂತನಾಗಬೇಕು ಮತ ಒಂದಾಗಬೇಕು //೧//
ಜಪದಜಾಣುವೆ ಬೇಕು ತಪದ ನೇಮವೆ ಬೇಕು
ಉಪವಾಸ ವ್ರತ ಬೇಕು ಉಪಶಾಂತವಿರಬೇಕು //೨//
ಸುಸಂಗ ಹಿಡಿಯಲೆಬೇಕು ದುಸ್ಸಂಗ ಬಿಡಬೇಕು
ರಂಗವಿಠಲನ್ನ ಬಿಡದೆ ನೆರೆ ನಂಬಿರಬೇಕು ೩ //೩//

ಈ ಕೀರ್ತನೆಯಲ್ಲಿ ಮುಕ್ತಿಯನ್ನು ಬಯಸುವವವರಿಗೆ ವಾತಾವರಣ ಹೇಗೆ ಅನುಕೂಲವಾಗಿರಬೇಕು ಎಂಬುದರ ಚಿತ್ರಣವಿದೆ. ಇವರ ಕೀರ್ತನೆಗಳಲ್ಲಿ ಆತ್ಮಶೋಧನೆ, ಭಗವಂತನ ಆರಾಧನೆ, ದ್ವೈತತತ್ವ ಪ್ರತಿಪಾದನೆ ಮತ್ತು ಲೋಕದ ನೀತಿ, ನೀತಿ ಬೋಧನೆಗಳು ಅಡಕವಾಗಿವೆ.೩ ನಾವು ಯಾವುದೇ ಮಹತ್ತರ ಕೆಲಸವನ್ನು ಮಾಡಬೇಕಾದರೆ ಅಥವಾ ಸಾಧನೆ ಮಾಡಬೇಕಾದರೆ ನಮ್ಮ ಸುತ್ತಮುತ್ತಲಿನ ವಾತಾವರಣ ಬಹಳ ಮುಖ್ಯ. ಏಕೆಂದರೆ ಒಬ್ಬ ವ್ಯಕ್ತಿಯ ಒಳ್ಳೆಯ ಕೆಲಸಕ್ಕೆ ಎಲ್ಲರ ಸಹಕಾರ, ಉತ್ತೇಜನ ಬಹಳ ಮುಖ್ಯವಾಗಿರುತ್ತೆ. ಕೆಲಸ ಮಾಡುವ ವ್ಯಕ್ತಿಗೆ ನಾವು ಧನಾತ್ಮಕವಾಗಿ ಒಂದೆರಡು ಮಾತುಗಳನ್ನು ಆಡಿದಾಗ ಅವನಲ್ಲಿ ಕೆಲಸ ಮಾಡುವ ಉತ್ಸಾಹ ಹೆಚ್ಚಾಗುತ್ತದೆ. ಅದೇ ರೀತಿಯಲ್ಲಿ ಶ್ರೀಪಾದರಾಜರು ನಾವು ಮುಕ್ತಿಯನ್ನು ಪಡೆಯಬೇಕಾದರೆ ನಮ್ಮ ಸುತ್ತಮುತ್ತಲಿನ ವಾತಾವರಣ ಹೇಗೆ ಇರಬೇಕು ಎಂಬುದನ್ನು ತಿಳಿಸಿದ್ದಾರೆ. ಜನನ–ಮರಣಗಳಿಂದ ಬಿಡುಗಡೆ ಹೊಂದುವುದೇ ಮುಕ್ತಿ. ಮುಕ್ತಿಯನ್ನು ಬಯಸುವಂತ ವ್ಯಕ್ತಿಗಳಲ್ಲಿ ಅಚಲವಾದ, ದೃಢವಾದ ಭಕ್ತಿಯನ್ನು ಹೊಂದಿರಬೇಕು. ಮುಕ್ತಿಯನ್ನು ಬಯಸುವ ವ್ಯಕ್ತಿಗೆ ಹೆಂಡತಿಯಾದವಳ ಸಹಕಾರ ಇರಬೇಕು. ಮಗನಲ್ಲಿ ಒಳ್ಳೆಯ ಗುಣಗಳು ಇರಬೇಕು. ಅಲ್ಲದೇ ಜ್ಞಾನ, ಅರಿವು ಹೊಂದಿರಬೇಕು. ಮನೆಯಲ್ಲಿ ಇರುವ ಎಲ್ಲಾ ಸದಸ್ಯರ ಅಭಿಪ್ರಾಯವೂ ಒಂದೇ ಆಗಿರಬೇಕು. ಎಲ್ಲರಲ್ಲಿ ನಂಬಿಕೆ, ಪ್ರೀತಿ ಹೊಂದಿದಾಗ ಮಾತ್ರ ಆ ವ್ಯಕ್ತಿ ಮುಕ್ತಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಮುಕ್ತಿಬಯಸುವಂತ ವ್ಯಕ್ತಿಗೆ ಜಪವನ್ನು ಹೇಗೆ ಕೈಗೊಳ್ಳಬೇಕು ಎಂಬ ಜಾಣ್ಮೆ, ತಪಸ್ಸನು ಆಚರಿಸಲು ಇರುವ ನೀತಿ ನಿಯಮಗಳು ಮತ್ತು ಉಪವಾಸ ವ್ರತ ಕೈಗೊಂಡಾಗ ತಾಳ್ಮೆ, ನೆಮ್ಮದಿಯಿಂದ ಮಾಡಬೇಕು. ಅಷ್ಟೇ ಅಲ್ಲದೆ ಪ್ರಮುಖವಾಗಿ ಮನಸ್ಸನ್ನು ಏಕಾಗ್ರತೆಯಿಂದ ಇಟ್ಟುಕೊಂಡು ಇವೆಲ್ಲವನ್ನು ಮಾಡಿದರೆ ಉತ್ತಮ ಫಲ ದೊರೆಯುತ್ತದೆ. ಮುಖ್ಯವಾಗಿ ನಾವು ಇರುವ ಪರಿಸರ ನಮ್ಮ ವ್ಯಕ್ತಿತ್ವವನ್ನು ರೂಪಿಸಲು ಕಾರಣವಾಗುತ್ತದೆ. ಏಕೆಂದರೆ ಒಳ್ಳೆಯವರ ಸ್ನೇಹವನ್ನು ಮಾಡಿದೆಯಾದರೆ, ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳುವುದರೊಂದಿಗೆ ನಮ್ಮ ಜೀವನ ಉತ್ತಮವಾಗಿರುತ್ತದೆ. "ಸಜ್ಜನರ ಸಂಗ ಹೆಜ್ಜೇನು ಸವಿದಂತೆ" ಎಂಬ ದಾಸರ ಮಾತು ನಿಜವಾಗುತ್ತದೆ. ಕೆಟ್ಟವರ ಸಂಗವನ್ನು ಮಾಡಿದಾಗ ಅದರಿಂದ ಸಿಗುವಂತ ಪ್ರತಿಫಲವೂಕೂಡ ಕೆಟ್ಟದಾಗಿರುತ್ತದೆಯೆಂದು ಹೇಳುತ್ತಾ ಸುಸಂಗವನ್ನು ಹಿಡಿಯಬೇಕು. ದುಸ್ಸಂಗ ಬಿಡಬೇಕು. ಎಂದು ತಿಳಿಸಿದ್ದಾರೆ. ನಾವು ದೇವರನ್ನು ಪರಿಪೂರ್ಣವಾಗಿ ಕಾಯ, ವಾಚ, ಮನಸ್ಸಿನಿಂದ ರಂಗ ವಿಠ್ಠಲನನ್ನು ನಂಬಿದಾಗ ಮಾತ್ರ ಮುಕ್ತಿ ದೊರೆಯಲು ಸಾಧ್ಯ ಎಂದು ಹೇಳಿದ್ದಾರೆ.

ಪಂಪ, ಕುಮಾರವ್ಯಾಸರು, ವಚನಕಾರರು ಮತ್ತು ದಾಸರಲ್ಲಿರುವ ವ್ಯತ್ಯಾಸವಿಷ್ಟೆ. "ಪಂಪ, ಕುಮಾರವ್ಯಾಸರು ಸಂಸಾರಿಕ ಜೀವನದ ನಶ್ವರತೆಯನ್ನು ಎತ್ತಿ ಹಿಡಿದು ಮೋಕ್ಷವೇ ಜೀವನದ ಅಂತಿಮ ಗುರಿ ಎಂದರು. ಆದರೆ ವಚನಕಾರರು ಮತ್ತು ದಾಸರು ಸಂಸಾರಿಕ ಜೀವನವನ್ನು ಅತ್ಯಂತ ಸಹನುಭೂತಿಯಿಂದ ನೋಡಿ ಸಂಸಾರದಲ್ಲಿದ್ದುಕೊಂಡೇ ಭಗವಂತನ ಸಹಾಯದಿಂದ ಮುಕ್ತಿಯನ್ನು ಪಡೆಯಬಹುದೆಂದರು.೪

ಈತನೀಗ ನಮ್ಮದೇವನು
ಪ್ರೀತಿಯಿಂದಲಿ ಸ್ಮರಿಸುವವರ । ಪಾತಕಗಳ ಪರಿಹರಿಪ
ಅಕ್ರೂರನ ಪ್ರೀತನೀತ । ಶಂಖಚಕ್ರ ಧರಿಸಿದಾತ
ನಕ್ರಬಾಧೆಯ ತರಿದು ತನ್ನ । ಭಕ್ತರನ್ನು ಕಾಯಿದಾತ //೧//
ಅಜಮಿಳನ ಸಲಹಿದಾತ । ವ್ರಜದಗೋವು ಕಾಯಿದಾತ
ಭಜಿಸುವವರ ಬಿಡನು ಪ್ರೀತ । ತ್ರಿಜಗದೊಳಗೆ ಮೆರವದಾತ //೨//
ಸಕಲ ಗುಣ ಪೂರ್ಣನೀತ । ಸಕಲ ದೋಷ ದೂರನೀತ
ಸಕಲಾನಂದ ಪೂರ್ಣನೀತ । ಭಕುತಿ ಮಂತ್ರಕೊಲಿವದಾತ //೩//
ಅನಾಥ ಬಾಂಧವನೀತ । ಅನಾದಿ ಕಾಲದವನಾತ
ಅನಾದಿ ಮೊರೆಯ ಕೇಳಿ । ಆ ನಿಮಿಷದೊಳು ಒದಗಿದಾತ //೪//
ಕಮಲಮುಖಿಯ ರಮಣನೀತ । ಕಮಲಾಸನಜನಕನೀತ
ಕಮಲಾಕ್ಷ ಗೋಪಾಲವಿಠಲ ಹೃತ್ । ಕಮಲದೊಳು
ನಿಲುವದಾತ.೩//೫//

ದೇವರು ಭಕ್ತರ ಪರಾಧೀನ. ಅನಾಥ ರಕ್ಷಕನು. ಭಕ್ತರು ಭಕ್ತಿಯಿಂದ ಮೊರೆಯಿಟ್ಟರೆ ಅವರ ಸಂಕಷ್ಟಗಳನ್ನು ಪರಿಹರಿಸುತ್ತಾನೆ. ಪ್ರೀತಿಯಿಂದ ಕರೆದರೆ ಬಂದು ಸಹಾಯ ಮಾಡುತ್ತಾನೆ. ಆದುದರಿಂದ ಆ ಭಗವಂತನ್ನು ಹೃದಯ ಕಮಲದೊಳಿಟ್ಟು ಆರಾಧಿಸಬೇಕು. ನಂಬಿ ಕೆಟ್ಟವರಿಲ್ಲ ಎಂಬ ಮಾತು ದಿಟ. ನಂಬಿಕೆ, ಪ್ರೀತಿ, ದೃಢಸಂಕಲ್ಪಗಳು ಅಚಲವಾಗಿರಬೇಕು ಎಂದು ಗೋಪಾಲದಾಸರು ತಮ್ಮ ಕೀರ್ತನೆಯಲ್ಲಿ ತಿಳಿಸಿದ್ದಾರೆ. ಗೋಪಾಲದಾಸರು ಕೆಲವು ನಿದರ್ಶನಗಳ ಮೂಲಕ ದೇವರಲ್ಲಿ ಮೊರೆ ಇಡುವವರನ್ನು ರಕ್ಷಣೆ ಮಾಡುತ್ತಾನೆ ಎಂಬುದನ್ನು ತಿಳಿಸಿದ್ದಾರೆ. ಯಾರು ದೇವರನ್ನು ಪ್ರೀತಿಯಿಂದ ಸ್ಮರಿಸುವರೋ ಅವರ ಪಾಪಕರ್ಮಗಳನ್ನು ಕ್ಷಮಿಸಿ ಅವರನ್ನು ಕಷ್ಟದಿಂದ ಪಾರು ಮಾಡುತ್ತಾನೆ.

ಕೃಷ್ಣನ ಸೋದರ ಮಾವನಾದ ಕಂಸನ ಅಷ್ಟ ಮಂತ್ರಿಗಳಲ್ಲಿ ಅಕ್ರೂರ ಪ್ರಮುಖನಾದವನು. ಅವನು ನಂದ ಗೋಕುಲಕ್ಕೆ ಬಂದಾಗ ಕೃಷ್ಣ ಮತ್ತು ಬಲರಾಮನನ್ನು ಮಥುರ ನಗರಕ್ಕೆ ಕರೆದುಕೊಂಡು ಹೋಗಬೇಕಾದರೆ ಯಮುನಾ ನದಿಯಲ್ಲಿ ಸ್ನಾನ ಮಾಡುವಾಗ ಕೃಷ್ಣ ತನ್ನ ನಿಜವಾದದೈವ ಸ್ವರೂಪವನ್ನು ಅಕ್ರೂರನಿಗೆ ತೋರಿಸುತ್ತಾನೆ. ದೇವರು ಯಾವಾಗಲೂ ಭಕ್ತರನ್ನು ರಕ್ಷಿಸುವಲ್ಲಿ ಕಾರ್ಯನಿರತನಾಗಿರುವನು. ಎನ್ನುವುದಕ್ಕೆ ಈ ಘಟನೆಯೇ ಸಾಕ್ಷಿ. ಒಂದು ದಿನ ಇನ್ನೊಬ್ಬ ಭಕ್ತ ಇಂದ್ರದುಮ್ಯ ಪಾಂಡ್ಯದ ರಾಜ. ಅಗಸ್ತ್ಯ ಮುನಿಗಳು ಬರುವಾಗ ಅವರನ್ನು ಅವಮಾನ ಗೊಳಿಸಿದ್ದಕ್ಕಾಗಿ ಮುನಿಗಳು ಅವನಿಗೆ ಆನೆಯಾಗು ಎಂದು ಶಾಪ ಕೊಟ್ಟರು. ಆಗ ಆನೆ ರೂಪದಲ್ಲಿದ್ದ ಇಂದ್ರದುಮ್ಯ ಒಂದು ದಿನ ನದಿಯಲ್ಲಿ ನೀರು ಕುಡಿಯಲು ಹೋದಾಗ ಕಾಲನ್ನು ಮೊಸಳೆಯೊಂದು ಹಿಡಿಯಿತು. ಅದರಿಂದ ರಕ್ಷಿಸಿ ಶಾಪ ಮುಕ್ತನನ್ನಾಗಿ ಮಾಡಿದವನು ನಾರಾಯಣ. ಎರಡನೆಯದು ಹಸುಗಳು ಕಾಯುವವರು ಮತ್ತು ತನ್ನನ್ನು ಆರಾಧಿಸುವವರನ್ನು ಆ ದೇವರು ಎಂದೂ ಕೈ ಬಿಡುವುದಿಲ್ಲ. ಮೂರು ಲೋಕದಲ್ಲಿ ತನ್ನ ಮಹಿಮೆಯನ್ನು ತೋರಿಸಿದವನು ಶ್ರೀಹರಿ. ಸದಾ ಒಳ್ಳೆಯ ಗುಣಗಳನ್ನು ಹೊಂದಿ ದೋಷಗಳಿಂದ ದೂರವಿರುವವನಿಗೆ, ಸಂತೋಷದಿಂದ ಇರುವವನಿಗೆ ಮತ್ತು ಶ್ರೇಷ್ಠ ಭಕ್ತಿಗೆ ಒಲಿಯುವನು. ದಿಕ್ಕುದೆಸೆ ಇಲ್ಲದವರಿಗೆ ಬಂಧುವಾಗುವನು. ಯುಗಯುಗಗಳಿಂದ ಪೂಜಿಸಿಕೊಳ್ಳುವವನು ವಿಷ್ಣು. ಯಾರಾದರೂ ತಮ್ಮ ಕಷ್ಟಗಳನ್ನು ಹೇಳಿಕೊಂಡರೆ ಕ್ಷಣಮಾತ್ರದಲ್ಲಿ ಬಂದು ಪರಿಹರಿಸುವನು. ಕಮಲಮುಖಿಯರಮಣನಾದ ಅಂದರೆ ಲಕ್ಷ್ಮೀಯ ಪತಿಯಾದ ಶ್ರೀವಿಷ್ಣು ಎಲ್ಲರ ಹೃದಯದಲ್ಲಿ ನೆಲೆಸಿರುತ್ತಾನೆ ಎಂದು ಗೋಪಾಲದಾಸರು ಹೇಳಿದ್ದಾರೆ.

ಮಾನವನ ಜನ್ಮದ ಸಾರ್ಥಕ್ಯವು ಮುಕ್ತಿ ಗಳಿಸುವುದರಲ್ಲಿಡಗಿದೆ. ಇಹಲೋಕದಿಂದ ಮುಕ್ತನಾಗಲು ಸದಾ ಹರಿನಾಮ ಸ್ಮರಣೆ ಮಾಡಬೇಕು. ದೃಢವಾದ, ಅಚಲವಾದ ಭಕ್ತಿಯಿಂದ ದೈವ ಸಾಕ್ಷಾತ್ಕಾರವಾಗುತ್ತದೆ. ಭಕ್ತ ಮತ್ತು ಭಕ್ತಿ ಒಂದಾದಾಗ ಮಾತ್ರ ಮುಕ್ತಿ ಸಾಧ್ಯವೆಂದು ಈ ಕೀರ್ತನೆಯಲ್ಲಿ ವ್ಯಕ್ತವಾಗಿದೆ.

ಸದಾ ಎನ್ನ ಹೃದಯದಲ್ಲಿ ವಾಸಮಾಡೋ ಶ್ರೀಹರಿ
ನಾದಮೂರ್ತಿ ಮೋದದಿಂದ ನಿನ್ನ ಪಾದ ಭಜಿಸುವೆ
ಜ್ಞಾನವೆಂಬೊ ನವರತ್ನದ ಮಂಟಪದ ಮಧ್ಯದಲ್ಲಿ
ಗಾನಲೋಲನ ಕುಳ್ಳಿರಿಸಿ । ಧ್ಯಾನದಿಂದ ಭಜಿಸುವೆ //೧//
ಭಕ್ತಿರಸವೆಂಬ ಮುತ್ತು ಮಾ । ಣಿಕ್ಯದ ಹರಿವಾಣದಿ
ಮುಕ್ತನಾಗಬೇಕೆಂದು ಮುತ್ತಿನಾರತಿ ಎತ್ತುವೆ //೨//
ನಿನ್ನ ನಾಮ ಬಿಡುವನಲ್ಲ । ಎನ್ನ ನೀನು ಬಿಡಲು ಸಲ್ಲ
ಘನ ಮಹಿಮ ವಿಜಯವಿಠಲ ಕೇಳೊ ನಿನ್ನ ಭಕ್ತರ ಸೊಲ್ಲ ೩//೩//

ವಿಜಯದಾಸರು ಹೇಳುವಂತೆ ಹರಿಯು ಯಾವಾಗಲೂ ನಮ್ಮ ಹೃದಯದಲ್ಲಿ ವಾಸ ಮಾಡುತ್ತಾನೆ. ಆತನನ್ನು ಸಂತೋಷದಿಂದ, ಆನಂದದಿಂದ ಪೂಜಿಸುವೆ. ಅಷ್ಟೇ ಅಲ್ಲದೆ ಅರಿವು ಎಂಬ ನವರತ್ನದ ಮಂಟಪದ ಮಧ್ಯದಲ್ಲಿ (ಮುತ್ತು, ಮಾಣಿಕ್ಯ, ವೈಢೂರ್ಯ, ವಜ್ರ, ಗೋಮೇಧಿಕ, ಹವಳ, ಮರಕತ, ಪುಷ್ಯರಾಗ, ನೀಲಿ) ಸಂಗೀತ ಪ್ರಿಯನಾದ ಶ್ರೀಹರಿಯನ್ನು ಕುಳ್ಳಿರಿಸಿ ಧ್ಯಾನದಿಂದ ಭಜಿಸುವೆನು. ಭಕ್ತಿರಸವೆಂಬ ಮುತ್ತು ಮಾಣಿಕ್ಯದ ತಟ್ಟೆಯಿಂದ ಮುತ್ತಿನ ಆರತಿ ಬೆಳಗುವೆನು ಎಂದಿದ್ದಾರೆ. ಸದಾ ನಿನ್ನನ್ನು ಸ್ಮರಿಸುತ್ತೇನೆ ನೀನು ಕೂಡ ನನ್ನನ್ನು ಕೈಬಿಡಬೇಡ. ನಿನ್ನ ಭಕ್ತನ ಕೈಯನ್ನು ಸದಾ ಹಿಡಿಯಬೇಕು. ಶ್ರೇಷ್ಠವಾದ ಮಹಿಮೆಯನ್ನು ಹೊಂದಿರುವ ವಿಜಯ ವಿಠ್ಠಲ ನಿನ್ನ ಭಕ್ತರ ಧ್ವನಿಯನ್ನು ಆಲಿಸು ಎಂದು ವಿಜಯದಾಸರು ಹೇಳಿದ್ದಾರೆ.

ಕೀರ್ತನೆಗಳು ಸಮಾಜದಲ್ಲಿರುವ ಅಂಧಕಾರ, ಅಷ್ಟಮದಗಳು ಮತ್ತು ಅರಿಷಡ್ವರ್ಗಗಳಿಗೆ ಕಡಿವಾಣ ಹಾಕಿ ದಾನ-ಧರ್ಮಕ್ಕೆ ಪ್ರಾಶಸ್ತ್ಯ ನೀಡಿ, ಜೀವನದಲ್ಲಿ ದುರಾಸೆ, ದುರ್ಮಾರ್ಗಗಳನ್ನು ಕೊನೆಗೊಳಿಸುತ್ತವೆ. ದಾಸರು ಬರೆದ ಕೀರ್ತನೆಗಳನ್ನು ನಾವೆಲ್ಲರು ಓದುವುದರಿಂದ ಅಥವಾ ಹಾಡುವುದರಿಂದ "ಹೂವನಿಂದ ನಾರು ಸ್ವರ್ಗ ಸೇರಿದಂತೆ" ದಾಸರಿಂದ ಜನಸಾಮಾನ್ಯರಾದ ನಾವು ಹರಿನಾಮ ಸ್ಮರಣೆಯಿಂದ ಜೀವನ ಪಾವನಗೊಳಿಸಿಕೊಳ್ಳುತ್ತೇವೆ.

**ಪರಾಮರ್ಶ ಗ್ರಂಥಗಳು**


೧. ಡಾ.ಚಿ.ಸಿ.ನಿಂಗಣ್ಣ ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ ಪುಟ ಸಂಖ್ಯೆ-೫೪,೫೫ (೨೦೦೮)
೨. ಎಚ್.ಎಸ್.ವೆಂಕಟೇಶ್ ಮೂರ್ತಿ ಸಾಮಾನ್ಯನಿಗೆ ಸಾಹಿತ್ಯಚರಿತ್ರೆ ಪುಟ ಸಂಖ್ಯೆ-೩ (೨೦೧೫)
೩. ಸಿರಿ ಕನ್ನಡ ಪಠ್ಯ ಪುಸ್ತಕ ಕರ್ನಾಟಕ ಸರ್ಕಾರ ಪುಟ ಸಂಖ್ಯೆ -೧೨೪,೧೨೫, ೧೨೬ (೨೦೨೨)
4. ಹರಿದಾಸ ಸಂಪದ-ದಾಸರೆಲ್ಲರ ವಸ್ತು ಒಂದೇ ಆಗಿದ್ದರೂ ಸಾಮಾಜಿಕ ದೃಷ್ಟಿಕೋನ-೨೦೦೮